ಹೋಗಿ ಮುಂದೆ ಅಪ್ಪನ ಆಣತಿಯಂತೆ ಓದಿಗೆ ತರ್ಪಣಬಿಟ್ಟು ಮನೆಗೆಲಸದಲ್ಲಿ ಪಳಗಿದ ಪಾರ್ವತಿಯನ್ನು ಮದುವೆ ಮಾಡಿಕೊಳ್ಳಲು ಬದರಿನಾಥರು ಆರಂಭದಲ್ಲಿ ಒಂದಿಷ್ಟು ಮುನಿಸು ತೋರಿದರಾದರೂ, ಮರಣಶಯ್ಯೆಯಲ್ಲಿರುವ ಅವ್ವನ ಆಸೆ ಅವರನ್ನು ಕಟ್ಟಿಹಾಕಿತ್ತು. ಈ ವೇಳೆಗಾಗಲೆ ಯೂನಿವರ್ಸಿಟಿಯ ಕ್ಯಾಂಪಸ್ಸಿನಲ್ಲಿ ದೃಷ್ಟಿಗೆ ಗೋಚರಿಸುತ್ತಿದ್ದ ಸುಂದರ ತರುಣಿಯರ ದರ್ಶನ ಭಾಗ್ಯದಿಂದ ರಾತ್ರಿ ಹಾಸಿಗೆಗೆ ಒರಗಿದ್ದೇ ತಡ ದೇಹದ ಕಣಕಣದಲ್ಲಿ ಪುಟಿದೆದ್ದು ಹಿಂಸಿಸುತ್ತಿದ್ದ ಕಾಮ ತೃಪ್ತಿಗಾಗಿ ಈ ಮದುವೆ ಒಂದು ಪರ್ಯಾಯ ವ್ಯವಸ್ಥೆಯಂತೆ ಕಾಣಿಸಿ, ಪಾರ್ವತಿಯ ಸಖನಾಗಲು ಹೂಂ ಅಂದಿದ್ದರು. ಪತ್ನಿಯಾಗಿ ಬಂದ ಪಾರ್ವತಿ ಮೂರು ಮಕ್ಕಳನ್ನು ಹೆತ್ತುಕೊಟ್ಟು ಸಂಸಾರವನ್ನು ಅಚ್ಚುಕಟ್ಟಾಗಿ ತೂಗಿಸುತ್ತ ಬದರಿನಾಥರ ದೇಹ ಮತ್ತು ಮನಸ್ಸು ತಂಪಾಗಿರುವಂತೆ ನೋಡಿಕೊಂಡು, ಪತಿಯ ಇವತ್ತಿನ ಎಲ್ಲ ಅಕಡೆಮಿಕ್ ಯಶಸ್ಸಿನ ಹಿಂದೆ ಬಲವಾದ ಶಕ್ತಿಯಾಗಿ ನಿಂತಿದ್ದರು. ಆದರೂ ಹೆಂಡತಿ ತಮ್ಮ ಶೈಕ್ಷಣಿಕ ಸಾಧನೆಗೆ ಸರಿಸಮಾನಳಲ್ಲ ಎನ್ನುವ ನೋವು ಬದರಿನಾಥರ ಮನಸ್ಸಿನ ಆಳದಲ್ಲಿ ತಳವೂರಿ ಕುಳಿತು ಆಗಾಗ ಮೇಲೆದ್ದು ಬಂದು ಚುಚ್ಚುತ್ತಿತ್ತು. ಈ ನೋವಿನ ಉಪಶಮನಕ್ಕೆಂಬಂತೆ ದೇವರೇ ವಸುಮತಿಯನ್ನು ತಮಗೆ ಜೊತೆಯಾಗಿ ಕಳುಹಿಸಿರುವನೆಂದು ಅವರು ಬಲವಾಗಿ ನಂಬಿದ್ದರು.

* * *

‘ಈ ಬೌದ್ಧಿಕ ಸಾಂಗತ್ಯ, ಬೌದ್ಧಿಕ ಸಾಧನೆಗೆ ಹೆಣ್ಣು ಸ್ಫೂರ್ತಿ ಅನ್ನೋದೆಲ್ಲ ಹಿಪಾಕ್ರಸಿ. ಈ ಬಯಕೆಯ ಹಿಂದೆ ಇರೋದೆಲ್ಲ ಬರೀ ಕಾಮ. ಈ ಸೆಕ್ಸ್ ಅನ್ನೋದು ಒಂದು ವಯಸ್ಸಿನವರೆಗೆ ಮಾತ್ರ ಬೇಕು ಅನಿಸುತ್ತೆ. ಮನುಷ್ಯ ದೈಹಿಕವಾಗಿ ಮತ್ತು ಮಾನಸಿಕವಾಗಿ ಮಾಗಿದಂತೆಲ್ಲ ಸೆಕ್ಸ್ ನೇಪಥ್ಯಕ್ಕೆ ಸರಿಯುತ್ತೆ. ತನ್ನ ಅರವತ್ತನೇ ವಯಸ್ಸಿನಲ್ಲಿ ಮದುವೆಯಾದ ಪ್ರೊಫೆಸರ್‌ನನ್ನು ಇವತ್ತು ಕಾನ್ಫರೆನ್ಸ್ ಹಾಲ್‌ನಲ್ಲಿ ಹೊಗಳಿದ್ದೇನು, ಪ್ರಶಂಸಿಸಿದ್ದೇನು ನನಗೆ ತುಂಬ ಆಶ್ಚರ್ಯ ಅನಿಸಿತು. ತನಗಿಂತ ವಯಸ್ಸಿನಲ್ಲಿ ಮೂವತ್ತು ವರ್ಷ ಚಿಕ್ಕವಳಾದ ತನ್ನ ವಿದ್ಯಾರ್ಥಿನಿಯನ್ನು ಮದುವೆಯಾದದ್ದೇ ಅವನಲ್ಲಿ ಬೌದ್ಧಿಕತೆಯ ಅಸಾಧಾರಣವಾದ ವಿಕಾಸಕ್ಕೆ ಕಾರಣವಂತೆ. ನಾನ್‌ಸೆನ್ಸ್, ಸೆಕ್ಸ್ ಬೌದ್ಧಿಕ ಬೆಳವಣಿಗೆಗೆ ಕಾರಣ ಆಗೋದಾದರೆ ದೇಶ ಬರೀ ಜೀನಿಯಸ್‌ಗಳಿಂದಲೆ ತುಂಬಿರುತ್ತಿತ್ತು...’

ಪ್ರೊಫೆಸರ್ ಮಧುಕೇಶ್ವರ ತಮ್ಮ ಎಂದಿನ ಗತ್ತಿನಲ್ಲಿ ಮಾತನಾಡುತ್ತಿದ್ದರೆ, ಟೇಬಲ್ ಸುತ್ತ ಕುಳಿತವರು ಅವರ ಮಾತುಗಳನ್ನು ಮೈಯೆಲ್ಲ ಕಿವಿಯಾಗಿ ಕೇಳಿಸಿಕೊಳ್ಳುತ್ತಿದ್ದರು. ಅವರು ಮಾತನಾಡುತ್ತಿದ್ದದ್ದು ಸಮ್ಮೇಳನ ಆಯೋಜಿಸಿರುವ ಹೈದರಾಬಾದಿನ ವಿಶ್ವವಿದ್ಯಾಲಯದ ಪ್ರೊಫೆಸರೊಬ್ಬರ ಕುರಿತು. ಆದರೆ ಪ್ರೊಫೆಸರ್ ಬದರಿನಾಥರಿಗೆ ಮಧುಕೇಶ್ವರ ಅವರ ಮಾತಿನಿಂದ ಎದೆಗೆ ಮುಳ್ಳು ಚುಚ್ಚಿದಂತಾಯಿತು.

ಹೈದರಾಬಾದಿನ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ಸಮಾಜಶಾಸ್ತ್ರಜ್ಞರ ಸಮ್ಮೇಳನಕ್ಕೆ ಪ್ರೊಫೆಸರ್ ಬದರಿನಾಥ ವಿಶೇಷ ಉಪನ್ಯಾಸಕರಾಗಿ ಆಹ್ವಾನಿತರಾಗಿದ್ದರು. ಬದರಿನಾಥರ ಉಪನ್ಯಾಸ ಸಮ್ಮೇಳನದ ಮುಖ್ಯ ಆಕರ್ಷಣೆಯಾಗಿತ್ತು. ಅವರ ಪತ್ನಿ ವಸುಮತಿ ತಮ್ಮ ಸಂಶೋಧನಾ ಪ್ರಬಂಧ ಮಂಡಿಸಿ ಪ್ರಶ್ನೆಗಳಿಗೆ ಉತ್ತರಿಸಿದ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಸಮ್ಮೇಳನದ ಅಂಗವಾಗಿ ಅತಿಥಿಗಳಿಗಾಗಿ ಏರ್ಪಡಿಸಿದ್ದ ವಿಶೇಷ ಔತಣಕೂಟದಲ್ಲಿ ಭೂರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಪಾನಪ್ರಿಯರಿಗಾಗಿ ಮದ್ಯದ ಸರಬರಾಜಿತ್ತು. ಊಟಕ್ಕಿಂತ ಮೊದಲು ಪಾನಗೋಷ್ಠಿಗೆಂದು ಪ್ರೊಫೆಸರ್ ಬದರಿನಾಥ ಕರ್ನಾಟಕದ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಂದ ಸುತ್ತುವರೆದಿದ್ದ ಟೇಬಲ್‌ಗೆ ಬಂದು ಕುಳಿತಿದ್ದರು.

ಬದರಿನಾಥರ ಕುರಿತು ಸಹಜವಾಗಿಯೆ ಹಿರಿಯ ಪ್ರೊಫೆಸರ್ ಮತ್ತು ವಿದ್ವಾಂಸರೆಂಬ ಗೌರವ ಅಲ್ಲಿದ್ದವರ ಮುಖದಲ್ಲಿ ಮನೆಮಾಡಿತ್ತು. ಪ್ರೊಫೆಸರ್ ಮಧುಕೇಶ್ವರ ಮಾತಿನ ಭರಾಟೆಯಲ್ಲಿ ತಮ್ಮ ಚರ್ಚೆಗೆ ಗ್ರಾಸವಾದವರ ಜನ್ಮ ಜಾಲಾಡುತ್ತಿದ್ದರು. ಒಂದು ಹಂತದಲ್ಲಿ ಅವರ ಮಾತಿನ ವಿಷಯ ಸೆಕ್ಸ್ ಮತ್ತು ಜೀನಿಯಸ್ ನಡುವಣ ಸಂಬಂಧದತ್ತ ವಾಲಿತು. ಮಧುಕೇಶ್ವರ ಅವರಿಗೆ ಚರ್ಚೆಗೆ ತುಂಬ ಆಸಕ್ತಿಯ ವಿಷಯವಿದು ಎನಿಸಿತು. ಇಂದು ಸಮ್ಮೇಳನದಲ್ಲಿ ವಿರಾಮದ ಸಂದರ್ಭ ಪ್ರೊಫೆಸರೊಬ್ಬರ ಎರಡನೇ ಮದುವೆ ಮತ್ತು ಅವರ ವಿದ್ವತ್ತಿನ ಕುರಿತು ಅನೌಪಚಾರಿಕವಾಗಿ ಚರ್ಚಿಸಿದ್ದು ನೆನಪಿಗೆ ಬಂದು ಈಗ ಅದೇ ವಿಷಯದ ಕುರಿತು ನಿರರ್ಗಳವಾಗಿ ಮಾತನಾಡುತ್ತಿದ್ದರು.

‘ಸರ್, ಕಲೆ, ಸಾಹಿತ್ಯ, ವಿಜ್ಞಾನ ಈ ಎಲ್ಲ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಸಾಧಕರು ತಮ್ಮ ವೃದ್ಧಾಪ್ಯದಲ್ಲಿ ತಮಗಿಂತ ಚಿಕ್ಕ ವಯಸ್ಸಿನವರನ್ನು ಮದುವೆ ಮಾಡಿಕೊಂಡ ಅನೇಕ ಉದಾಹರಣೆಗಳಿವೆ. ಇದೊಂದು ರೀತಿ ಬೌದ್ಧಿಕ ಸಾಂಗತ್ಯವೆಂದು ಕುಟುಂಬ ಮತ್ತು ಸಮಾಜ ಕೂಡ ಸಹಜವಾಗಿ ಸ್ವೀಕರಿಸಿವೆ. ಸೆಕ್ಸ್ ಮತ್ತು ಬೌದ್ಧಿಕ ವಿಕಸನದ ನಡುವೆ ಅಸಾಧಾರಣವಾದ ಸಂಬಂಧವಿದೆ ಎಂದರ್ಥವಲ್ಲವೆ?’ ಎಂದು ಪಿಎಚ್.ಡಿ. ಸಂಶೋಧನೆಯಲ್ಲಿ ತೊಡಗಿದ್ದ ಸಂಶೋಧಕ ಕೇಳಿದ ಪ್ರಶ್ನೆ ಮಧುಕೇಶ್ವರ ಅವರನ್ನು ಮತ್ತಷ್ಟು ಉತ್ತೇಜಿಸಿತು.

‘ರೀ, ಅದೆಲ್ಲ ಬರೀ ನಾಲ್ಕು ದಿನಗಳು ಮಾತ್ರ. ದೈಹಿಕ ಆಕರ್ಷಣೆ ಕಡಿಮೆಯಾದಂತೆಲ್ಲ ಮನಸ್ಸು ಶೂನ್ಯಸ್ಥಿತಿಗೆ ಬಂದು ನಿಲ್ಲುತ್ತೆ. ವಯಸ್ಸಿನ ಅಂತರ ಸೆಕ್ಸ್ ವಿಷಯದಲ್ಲಿ ಇಬ್ಬರ ನಡುವೆ ದೊಡ್ಡ ಕಂದಕವನ್ನು ನಿರ್ಮಾಣ ಮಾಡುತ್ತೆ. ಪ್ರೀತಿ, ನಂಬಿಕೆಗಳ ಜಾಗದಲ್ಲಿ ಅನುಮಾನ ಹೊಗೆಯಾಡುತ್ತೆ. ಸೆಕ್ಸ್‌ನ ವೈಫಲ್ಯದಿಂದ ಪಾತಾಳಕ್ಕೆ ಕುಸಿಯುವ ವಿದ್ವಾಂಸನಲ್ಲಿ ವಿದ್ವತ್ತು ಕೂಡ ನಶಿಸಲಾರಂಭಿಸುತ್ತೆ. ಸೆಕ್ಸ್ ಮತ್ತು ವಿದ್ವತ್ತು ಎರಡರಲ್ಲೂ ಏಕಕಾಲಕ್ಕೆ ಉತ್ತುಂಗಕ್ಕೆ ಏರಲು ಸಾಧ್ಯವಿಲ್ಲ. ವಿದ್ವತ್ತಿನ ಸಾಧನೆಗಾಗಿ ಕಾಮವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಿದ್ದರು ಅನ್ನೋದಕ್ಕೆ ಅನೇಕ ಸಾಧಕರ ಬದುಕೆ ಒಂದು ದೃಷ್ಟಾಂತ. ತನ್ನ ಬೌದ್ಧಿಕ ಪ್ರಗತಿಗೆ ತನ್ನಷ್ಟೆ ಬೌದ್ಧಿಕ ಎತ್ತರದಲ್ಲಿರುವ ಹೆಂಡತಿ ಮಾತ್ರ ಕಾರಣಳಾಗುತ್ತಾಳೆ ಎಂದು ಗಂಡು ಭಾವಿಸುವುದು ತಪ್ಪು. ಹೆಂಡತಿ ಬೌದ್ಧಿಕವಾಗಿ ಗಂಡನಿಗೆ ಸರಿಸಮಾನಳಿಲ್ಲ ಅಂದಮಾತ್ರಕ್ಕೆ ಅವನ ಬೌದ್ಧಿಕ ಸಾಧನೆಯಲ್ಲಿ ಅವಳ ಕೊಡುಗೆ ಕಡೆಗಣಿಸುವಂತಿಲ್ಲ. ಸಂಸಾರದ ಕಷ್ಟಕಾರ್ಪಣ್ಯದ ಬಿಸಿ ಗಂಡನಿಗೆ ತಾಕದಂತೆ ಕುಟುಂಬದ ಜವಾಬ್ದಾರಿಯನ್ನು ಸರಿದೂಗಿಸಿಕೊಂಡು ಹೋಗುವ ಅದೆಷ್ಟೋ ಹೆಣ್ಣುಮಕ್ಕಳು ಪತಿಯ ಅಕಡೆಮಿಕ್ ಸಾಧನೆಗೆ ಪರೋಕ್ಷವಾಗಿ ಕಾರಣರಾಗಿರುವರು’ ಎನ್ನುವ ಮಧುಕೇಶ್ವರ ಅವರ ವಿಶ್ಲೇಷಣೆ ವಿಷಯದ ಆಳವನ್ನು ಮುಟ್ಟಿ ಅಲ್ಲಿದ್ದವರಿಗೆ ಹೊಸ ಹೊಳಹು ಗೋಚರಿಸಿತು. ಇಡೀ ಚರ್ಚೆಯುದ್ದಕ್ಕೂ ಬದರಿನಾಥ ಒಂದು ಮಾತನ್ನೂ ಆಡದೆ ಶೂನ್ಯದಲ್ಲಿ ದೃಷ್ಟಿ ನೆಟ್ಟು ಮಧುಕೇಶ್ವರ ಅವರ ಅಸ್ಖಲಿತ ಮಾತುಗಳನ್ನು ಆಲಿಸುತ್ತಿದ್ದರು.

ಔತಣಕೂಟದಿಂದ ತಾವು ತಂಗಿದ್ದ ಹೋಟೇಲಿನ ರೂಮಿಗೆ ಹಿಂದಿರುಗಿದ ಬದರಿನಾಥ ರಾತ್ರಿಯೆಲ್ಲ ನಿದ್ದೆ ಇಲ್ಲದೆ ಹಾಸಿಗೆಯ ಮೇಲೆ ಹೊರಳಾಡಿದರು. ಹತ್ತಿರ ಬಂದು ಎದೆಯ ಮೇಲೆ ತಲೆಯಿಟ್ಟ ವಸುಮತಿಯನ್ನು ಪಕ್ಕಕ್ಕೆ ತಳ್ಳಿ ಹಾಸಿಗೆಯಿಂದ ಎದ್ದು ಟೇಬಲ್ ಲ್ಯಾಂಪ್ ಹೊತ್ತಿಸಿ ಪುಸ್ತಕವನ್ನು

